3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ , ತುಮಕೂರು

**Spl.C. No. 29/2021**

ಪ್ರಾಸಾ 11

ಚಾಸಾ 13

| | |
|---|---|
| ಹೆಸರು | ಚೇತನ್ |
| ತಂದೆಯ ಹೆಸರು | ಶಂಕರಪ್ಪ |
| ವಯಸ್ಸು | 40 ವರ್ಷ |
| ಉದ್ಯೋಗ | ಫ್ಯಾಕ್ಟರಿಯಲ್ಲಿ ಕೆಲಸ |
| ವಾಸಸ್ಥಳ | ಅಂತರಸನಹಳ್ಳಿ, ತುಮಕೂರು |

ಸಾಕ್ಷಿಯನ್ನು ದಿನಾಂಕ 06.06.2024 ರಂದು ಕರೆಸಿ ಪ್ರಮಾಣೀಕರಿಸಲಾಯ್ತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1) ನಾನು ವಸಂತನರಸಾಪುರದಲ್ಲಿ ಎಲೆಕ್ಟ್ರೀಷಿಯನ್ ಆಗಿ ಕೆಲಸ ಮಾಡುತ್ತಿದ್ದೇನೆ. ಚಾಸಾ.14 ರವರು ನನ್ನ ಸ್ನೇಹಿತ. 1 ನೇ ಆರೋಪಿಯನ್ನು ಒಂದು ಬಾರಿ ನೋಡಿರುತ್ತೇನೆ. ಅವರನ್ನು ನೋಡಿದರೆ ಗುರುತಿಸುತ್ತೇನೆ. 1 ನೇ ಆರೋಪಿಯು ಇಂದು ನ್ಯಾಯಾಲಯದ ಮುಂದೆ ಗೈರು ಹಾಜರಿದ್ದು ಅವರ ಗೈರು ಹಾಜರಿಗೆ ವಿನಾಯತಿ ಕೋರಿ ಅರ್ಜಿ ಸಲ್ಲಿಸಿದ್ದು ಅವರ ಗುರುತಿನ ಬಗ್ಗೆ ತಕರಾರು ಇರುವುದಿಲ್ಲ ಎಂದು ಆರೋಪಿ ಪರ ವಕೀಲರು ಸೂಚಿಸಿರುತ್ತಾರೆ. ಚಾಸಾ.14 ರವರಿಗೆ ನಾನು ಒಂದು ದ್ವಿಚಕ್ರ ವಾಹನ ತೆಗೆದುಕೊಳ್ಳಬೇಕು ಎಂದು ಕೇಳಿದಾಗ ಅವರು 1 ನೇ ಆರೋಪಿ ಹತ್ತಿರ ದ್ವಿಚಕ್ರ ವಾಹನ ಇದ್ದು ಅದನ್ನು ರೂ.25 ಸಾವಿರಕ್ಕೆ ಮಾರಾಟ ಮಾಡುವುದಾಗಿ ಮತ್ತು ದ್ವಿಚಕ್ರ ವಾಹನವನ್ನು ಈಗಲೇ ಕೊಡುತ್ತಾರೆ ಹಣವನ್ನು ಒಂದು ತಿಂಗಳ ನಂತರ

ಕೊಡಬಹುದಾಗಿ ತಿಳಿಸಿದರು. ಅದರಂತೆ 1 ನೇ ಆರೋಪಿಯ ಹೆಂಡತಿ ನನಗೆ ದ್ವಿಚಕ್ರ ವಾಹನವನ್ನು ಕೊಟ್ಟಿದ್ದು ಅದರ ಮೇಲೆ ಇದ್ದ ಸಾಲದ ಕಂತುಗಳನ್ನು ನಾನು ಪಾವತಿ ಮಾಡಿ ತೀರಿಸಿರುತ್ತೇನೆ ಹಾಗೂ ದ್ವಿಚಕ್ರ ವಾಹನವನ್ನು ನನ್ನ ಹೆಸರಿಗೆ ನೋಂದಣಿ ಮಾಡಿಸಿಕೊಂಡಿರುತ್ತೇನೆ.

2) ಸುಮಾರು 3 ವರ್ಷಗಳ ಹಿಂದೆ ಪೊಲೀಸರು ತುಮಕೂರು ಗ್ರಾಮಾಂತರ ಪೋ.ಠಾಣೆಗೆ ಕರೆಸಿ 1 ನೇ ಆರೋಪಿಯು ಕೊಲೆ ಮಾಡಿ ಸಿಕ್ಕಿಹಾಕಿಕೊಂಡಿರುತ್ತಾರೆ, ಅವರನ್ನು ನೋಡಿದ್ದೀರಾ ಮತ್ತು ಹಣವನ್ನು ನೀಡಿದ್ದೀರಾ ಎಂದು ಕೇಳಿರುತ್ತಾರೆ. ಆಗ ನಾನು ಹೌದು ಎಂದು ತಿಳಿಸಿರುತ್ತೇನೆ. ನಾನು ಪೊ.ಠಾಣೆಗೆ ಹೋದಾಗ ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ.

(ಈ ಹಂತದಲ್ಲಿ ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಯವರ ಮುಂದೆ ನೀಡಿದ ಹೇಳಿಕೆಗೆ /ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ಸರ್ಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗಂಡು ಅನುಮತಿ ನೀಡಲಾಯಿತು)

**ಪಾಟೀಸವಾಲುಃ ಸರ್ಕಾರಿ ಅಭಿಯೋಜಕರವರಿಂದಃ**

3) ಚಾಸಾ.14 ರವರು ರಾಯಲ್ ವೈನ್ಸ್ ಮುಂದೆ ಬೀಡಾ ಅಂಗಡಿಯನ್ನು ಇಟ್ಟುಕೊಂಡಿದ್ದು ನನಗೆ ಸ್ನೇಹಿತರಾಗಿದ್ದರು ಎಂದರೆ ಸರಿ. ನಾನು ಮೌಂಟ್ ರೂಫಿಂಗ್ ಫ್ಯಾಕ್ಟರಿಯಲ್ಲಿ ಕೆಲಸಕ್ಕೆ ಹೋಗುತ್ತಿದ್ದೆ ಎಂದರೆ ಸರಿ. ನಾನು ಮನೆಯಿಂದ ಕೆಲಸಕ್ಕೆ ಹೋಗಲು ದ್ವಿಚಕ್ರ ವಾಹನದ ಅವಶ್ಯಕತೆ ಇದ್ದು 2020 ಕ್ಕೆ ತೆಗೆದುಕೊಂಡರೆ ಮಾಡಲ್

ಸಿಗುತ್ತದೆ ಎಂದು ಸುಮ್ಮನಿದ್ದೆ ಎಂದರೆ ಸರಿ. 1 ನೇ ಆರೋಪಿಯು ಒಂದು ಲಗ್ಗೇಜ್ ಆಟೋ ತೆಗೆದುಕೊಳ್ಳಲು 50 ಸಾವಿರ ಹಣವನ್ನು ಚಾಸಾ.14 ರವರು ಕೊಟ್ಟಿರುತ್ತಾರೆ ಎಂದರೆ ಸರಿ. ನಂತರ ಚಾಸಾ.14 ರವರು ಬಂದು 1 ನೇ ಆರೋಪಿಗೆ ರೂ.25 ಸಾವಿರ ಹಣವನ್ನು ಕೊಡು, ಒಂದು ತಿಂಗಳಲ್ಲಿ ವಾಪಸ್ ಕೊಡುತ್ತಾನೆ ಎಂದು ಹೇಳಿದ್ದರು ಎಂದರೆ ಸರಿ. ನಂತರ 1 ನೇ ಆರೋಪಿಯ ಹತ್ತಿರ ಇದ್ದ ಅಪಾಚಿ ದ್ವಿಚಕ್ರ ವಾಹನವನ್ನು ನಾನು ಬಳಕೆ ಮಾಡುತ್ತಿದ್ದೆ ಎಂದರೆ ಸರಿ. ಒಂದು ವರ್ಷ ಕಳೆದರೂ ಸಹ 1 ನೇ ಆರೋಪಿಯು ರೂ.25 ಸಾವಿರ ಹಣವನ್ನು ವಾಪಸ್ ಕೊಟ್ಟಿರುವುದಿಲ್ಲ ಮತ್ತು ದ್ವಿಚಕ್ರ ವಾಹನವನ್ನೂ ಸಹ ಬಿಡಿಸಿಕೊಂಡಿರುವುದಿಲ್ಲ.

4) ಚಾಸಾ.14 ರವರು ನೀಡಿರುವ ರೂ.50 ಸಾವಿರ ಹಣವನ್ನು 1 ನೇ ಆರೋಪಿಯು ವಾಪಸ್ ಕೊಟ್ಟಿರುವುದಿಲ್ಲ ಎಂದರೆ ಸರಿ. ನಾನು ಚಾಸಾ.14 ರವರಿಗೆ 1 ನೇ ಆರೋಪಿಯಿಂದ ರೂ.25 ಸಾವಿರ ಹಣವನ್ನು ವಾಪಸ್ ಕೊಡಿಸುವಂತೆ ಕೇಳಿದಾಗ ಕರೋನಾ ಬಂದಿದ್ದರಿಂದ ವ್ಯಾಪಾರ ಇಲ್ಲ, ಕೊಡುತ್ತೇನೆ ಎಂದು 1 ನೇ ಆರೋಪಿ ಚಾಸಾ.14 ರವರಿಗೆ ಹೇಳಿರುವ ವಿಚಾರ ನನಗೆ ಗೊತ್ತಾಯಿತು ಎಂದರೆ ಸರಿ. ದಿನಾಂಕ 19.08.2020 ರಂದು 1 ನೇ ಆರೋಪಿಯು ತನ್ನ ಲಗ್ಗೇಜ್ ಆಟೋದಲ್ಲಿ ನಮ್ಮ ಅಂಗಡಿಯ ಬಳಿ ನೀರನ್ನು ಹಾಕಲು ಬಂದಾಗ ಚಾಸಾ.14 ರವರು 1 ನೇ ಆರೋಪಿಯ ಹತ್ತಿರ ಹಣವನ್ನು ಕೊಡುವಂತೆ ಕೇಳಿದಾಗ 1 ನೇ ಆರೋಪಿಯು ತಾನು ಅಂಗಡಿಯನ್ನು ಮುಚ್ಚಿದ್ದು ಜೀವನ ಮಾಡಲು ಕಷ್ಟಕರವಾಗಿದೆ, ನನಗೆ ಹಣವನ್ನು ನೀಡಿ ನೀನೇ ನನ್ನ ಆಟೋ ವಾಹನವನ್ನು ತೆಗೆದುಕೊಂಡು ಹೋಗು ಎಂದು ಹೇಳಿದ್ದಕ್ಕೆ 1 ನೇ ಆರೋಪಿ ಮತ್ತು ಆತನ ಸ್ನೇಹಿತರನ್ನು ಕರೆದುಕೊಂಡು ಬಂದು ಒಂದು ವಾರದ ಒಳಗೆ ನಿಮ್ಮ ಹಣವನ್ನು ಕೊಡುತ್ತೇನೆ, ಈಗ ಆಟೋ ಬಿಡಿ ಎಂದು ಹೇಳಿ ಬಿಡಿಸಿಕೊಂಡು ಹೋದ ವಿಚಾರ ನನಗೆ ತಿಳಿಯಿತು ಎಂದರೆ ಸರಿ.

5) ನಂತರ ತುಮಕೂರು ನಗರ ಪೋ.ಠಾಣೆಯ ಪೊಲೀಸರು ನನಗೆ ಕರೆ ಮಾಡಿ ಠಾಣೆಗೆ ಬರುವಂತೆ ತಿಳಿಸಿರುತ್ತಾರೆ ಎಂದರೆ ಸರಿ. ಆಗ 1 ನೇ ಆರೋಪಿಯು ತನ್ನ ಸ್ನೇಹಿತರೊಂದಿಗೆ ಸೇರಿ ನನಗೆ ಕೊಡಬೇಕಾಗಿದ್ದ ಹಣವಕ್ಕೆ ಯಾರನ್ನಾದರೂ ಕೊಲೆ ಮಾಡಿ ಅವರಿಂದ ಹಣ ದೋಚಿ ತನ್ನ ಹಣವನ್ನು ತೀರಿಸುವುದಾಗಿ 1 ನೇ ಆರೋಪಿ ಮತ್ತು ಆತನ ಸ್ನೇಹಿತರು ಮಾತನಾಡಿಕೊಂಡು ಅರುಣ್ ಕುಮಾರ್ ಎಂಬುವವರ ಮನೆಯಲ್ಲಿ ವಾಸವಾಗಿದ್ದ ಮೃತೆ ಅಂಜಲಿ ರವರನ್ನು ಕೊಲೆ ಮಾಡಿ ಅವರ ಬಳಿ ಇದ್ದ 550 ರೂ. ಮತ್ತು ಒಂದು ಮೊಬೈಲ್ ನ್ನು ತೆಗೆದುಕೊಂಡು ಬಂದಿರುವುದಾಗಿ ಪ್ರಕರಣ ದಾಖಲಾಗಿರುವ ಬಗ್ಗೆ ವಿಚಾರ ನನಗೆ ಗೊತ್ತಾಯಿತು ಎಂದರೆ ಸರಿ. ಅದರಂತೆ ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿ.

**ಪಾಟೀಸವಾಲುಃ 1 ಮತ್ತು 2 ನೇ ಆರೋಪಿ ಪರ ಶ್ರೀ.BKPS ವಕೀಲರಿಂದ :**

6) ಈ ಪ್ರಕರಣ ಆಗುವುದಕ್ಕಿಂತ ಸುಮಾರು 2 ವರ್ಷಗಳ ಮುಂಚೆಯಿಂದ ನಾನು ಮೌಂಟ್ ರೂಫಿಂಗ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿ. ಈಗ ನಾನು ಸದರಿ ಫ್ಯಾಕ್ಟರಿಯಲ್ಲಿ ಸುಮಾರು ಎರಡೂವರೆ ವರ್ಷದಿಂದ ಕೆಲಸ ಮಾಡುತ್ತಿಲ್ಲ. ಸದರಿ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದ ಬಗ್ಗೆ ನಾನು ಪೊಲೀಸರಿಗೆ ದಾಖಲಾತಿಯನ್ನು ಕೊಟ್ಟಿರುವುದಿಲ್ಲ. ನಾನು ರಾಯಲ್ ವೈನ್ಸ್ ಅಂಗಡಿಗೆ ಹೋದಾಗ ಚಾಸಾ.14 ರವರ ಪರಿಚಯವಾಗಿರುತ್ತದೆ ಎಂದರೆ ಸರಿಯಲ್ಲ. ಚಾಸಾ.14 ರವರಿಗೆ ಅತಿಯಾದ ಆದಾಯ ಇರುವುದಿಲ್ಲ ಎಂದರೆ ಗೊತ್ತಿಲ್ಲ.

7) ನನ್ನ ಹತ್ತಿರ ರೂ.25 ಸಾವಿರ ಹಣ ಇತ್ತು ಎಂದು ತೋರಿಸಲು ಪೊಲೀಸರಿಗೆ ದಾಖಲಾತಿಯನ್ನು ಕೊಟ್ಟಿಲ್ಲ. ನಾನು 1 ನೇ ಆರೋಪಿಗೆ ಹಣ ನೀಡಿರುವ ಬಗ್ಗೆ ಯಾವುದೇ ಕರಾರನ್ನು ಮಾಡಿಕೊಂಡಿರುವುದಿಲ್ಲ. ನಾನು ಯಾವುದೇ ಕೆಲಸ ಮಾಡುತ್ತಿರಲಿಲ್ಲ ಮತ್ತು ಸದರಿ ವೈನ್ಸ್ ನಲ್ಲಿ ಕುಡಿದು ಓಡಾಡಿಕೊಂಡಿದ್ದೆ ಎಂದರೆ ಸರಿಯಲ್ಲ. 1 ನೇ ಆರೋಪಿ ಮತ್ತು ಆತನ ಸ್ನೇಹಿತರು ಅಂಜಲಿ ರವರನ್ನು ಕೊಲೆ

ಮಾಡಿರುತ್ತಾರೆ ಎಂದು ಪೊಲೀಸರು ನನಗೆ ತಿಳಿಸಿಲ್ಲ ಎಂದರೆ ಸರಿಯಲ್ಲ. ಅಪಾಚಿ ದ್ವಿಚಕ್ರ ವಾಹನ ಈಗಲೂ ಸಹ ನನ್ನ ಹತ್ತಿರ ಇರುತ್ತದೆ. ಸದರಿ ದ್ವಿಚಕ್ರ ವಾಹನದ ಮೇಲೆ ಇದ್ದ ರೂ.75 ಸಾವಿರ ಸಾಲದ ಹಣವನ್ನು ನಾನು ಪಾವತಿ ಮಾಡಿರುತ್ತೇನೆ. 1 ನೇ ಆರೋಪಿಯ ಹೆಂಡತಿಯ ಹೆಸರು ನೆನಪಿಲ್ಲ. ಸಾಲದ ಹಣವನ್ನು ನಾನು ಪಾವತಿ ಮಾಡಿರುವ ಬಗ್ಗೆ ದಾಖಲಾತಿಗಳನ್ನು ಪೊಲೀಸರು ನನಗೆ ಕೇಳಿರುವುದಿಲ್ಲ. ಆ ಬಗ್ಗೆ ದಾಖಲಾತಿಗಳು ನನ್ನ ಬಳಿ ಇರುತ್ತವೆ. ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ಅಪಾಚಿ ದ್ವಿಚಕ್ರ ವಾಹನಕ್ಕೂ ಮತ್ತು 1 ನೇ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸಾಕ್ಷಿಯು ಅವರ ಹೆಂಡತಿಯ ಹೆಸರಿನಲ್ಲಿತ್ತು ಎಂದು ನುಡಿಯುತ್ತಾರೆ. 1 ನೇ ಆರೋಪಿಗೆ ಮದುವೆ ಆಗಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅವರ ಹೆಂಡತಿಯ ಹೆಸರು ಅಶ್ವಿನಿ ಎಂದು ನುಡಿಯುತ್ತಾರೆ. ಅಶ್ವಿನಿ ರವರ ಹೆಸರಿನಲ್ಲಿದ್ದ ಆರ್.ಸಿ. ಪುಸ್ತಕವನ್ನು ನಾನು ನೋಡಿರುವುದಿಲ್ಲ. ಅದರಲ್ಲಿ ಅವರ ಗಂಡನ ಹೆಸರು ಏನಿತ್ತೆಂದು ನಾನು ನೋಡಿರುವುದಿಲ್ಲ.

8) 1 ನೇ ಆರೋಪಿಗೆ ನಾನು ಯಾವುದೇ ಹಣ ನೀಡದಿದ್ದರೂ ಸಹ ಪೊಲೀಸರು ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವ ತಾರೀಖು ಮತ್ತು ಯಾವ ಅಧಿಕಾರಿ ನನ್ನನ್ನು ವಿಚಾರಣೆ ಮಾಡಿರುತ್ತಾರೆಂದು ಗೊತ್ತಿಲ್ಲ. ಅದರಲ್ಲಿ ಬರೆದಿರುವ ವಿಚಾರಗಳು ಗೊತ್ತಿಲ್ಲ. ಪೊಲೀಸರು ಇಂದು ನನ್ನನ್ನು ಕರೆದುಕೊಂಡು ಬಂದು ಯಾವ ರೀತಿ ಸಾಕ್ಷ್ಯ ಹೇಳಬೇಕು ಎಂದು ತಿಳಿಸಿದ್ದರಿಂದ ಅವರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ಅಂಗಡಿ ಇರುವುದಿಲ್ಲ. ನನ್ನ ಅಂಗಡಿಯ ಹತ್ತಿರ 1 ನೇ ಆರೋಪಿ ನೀರನ್ನು ಹಾಕಲು ಬಂದಿದ್ದ ಎಂದು ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿರುವುದಿಲ್ಲ. 1 ನೇ ಆರೋಪಿಯು ಮತ್ತು ಆತನ ಸ್ನೇಹಿತರು ನನಗೆ ಹಣ ತೀರಿಸುವ ಸಲುವಾಗಿ ಕೊಲೆ ಮಾಡಿ ಹಣ ದೋಚಿರುತ್ತಾರೆ ಎಂದುಪೊಲೀಸರು ನನಗೆ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ

ಸರಿಯಲ್ಲ. 1 ನೇ ಆರೋಪಿ ನನ್ನ ಹತ್ತಿರ ಯಾವುದೇ ಹಣ ಪಡೆದುಕೊಂಡಿಲ್ಲ ಮತ್ತು ಯಾವುದೇ ಹಣ ಕೊಡಬೇಕಾಗಿಲ್ಲ ಎಂದರೆ ಸರಿಯಲ್ಲ. ನಾನು 1 ನೇ ಆರೋಪಿಗೆ ಹಣ ನೀಡಿರುವ ಬಗ್ಗೆ ಯಾವುದೇ ದಾಖಲಾತಿ ಇರುವುದಿಲ್ಲ ಎಂದರೆ ಸರಿ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು.

ಸಾಕ್ಷಿಯ ಸಹಿ